**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 352/ 2020**

| | | |
|---|---|---|
| **ಸಾಕ್ಷಿಯ ಹೆಸರಃ** | **ಶರಣಗೌಡ ಎಂ.** | **ಪ್ರಾ.ಸಾಃ 10** |
| **ತಂದೆ/ಗಂಡನ ಹೆಸರುಃ** | **ಮಲಕಿನರಾಯ ನ್ಯಾಮಣ್ಣನವರ** | **ಚಾಸಾಃ 19** |
| **ವಯಸ್ಸುಃ** | **43 ವರ್ಷ** | **ದಿಃ 16-09-2021** |
| **ಉದ್ಯೋಗಃ** | **ಪಿ ಆಯ ಕೆಜಿ ಎಫ್** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಕೆ ಜಿ ಎಫ್** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 21-11-2018 ರಿಂದ 17-09-2020 ಇಲ್ಲಿಯವರೆಗೆ ಸಿ ಪಿ ಐ ಆಗಿ ಯಾದಗಿರಿ ವೃತ್ತ ಇಲ್ಲಿ ಕರ್ತವ್ಯ ನಿರ್ವಹಿಸಿರುತ್ತಿರುತ್ತೇನೆ.

ದಿಃ 27-02-2020 ರಂದು ಚಾಸಾಃ18 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು, ಅದೇ ದಿನ ಗುನ್ನೆ ಸ್ಥಳಕ್ಕೆ ಹೋಗಿ ಬೆ 9-00 ರಿಂದ 10-00 ಗಂಟೆಗೆ ಗುನ್ನೆ ಸ್ಥಳದ ಪಂಚನಾಮೆಯನ್ನು ಚಾಸಾಃ 4 ಮತ್ತು 5 ರವರ ಸಮಕ್ಷಮ ಮಾಡಿ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಅಪಘಾತಪಡಿಸಿದ ವಾಹನವನ್ನು ಜಪ್ತಿಪಡಿಸಿಕೂಂಡು ಐ ಎಂ ವಿ ವರದಿಗಾಗಿ ಆರ್ ಟಿ ಓ ಯಾದಗಿರಿಗೆ ಕಳುಹಿಸಿರುತ್ತೇನೆ. ಅದೇ ದಿನ ಚಾಸಾಃ 9 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿಃ10-03-2020 ರಂದು ಚಾಸಾಃ12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಮೃತರ ಪಿ ಎಂ ಈ ವರದಿ ಹಾಗೂ ಗಾಯಾಳುಗಳ ಗಾಯದ ಪ್ರಮಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೂಂಡಿರುತ್ತೇನೆ.

ದಿಃ01-04-2020 ರಂದು ಅಪಘಾತ ಪಡಿಸಿದ ಟ್ರಾಕ್ಟರನ ಮಾಲೀಕನಿಗೆ ಐ ಎಂ ವಿ ನೋಟಿಸನ್ನು ನೀಡಿ ಅವರಿಂದ ಉತ್ತರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಮೆಸ್ಸಿ ಕಂಪನಿಯ ಟ್ರಾಕ್ಟರ ನಂ. ಕೆಎ-33-ಟಿಎ-0022 ನ್ನು ಚಾಸಾಃ6 ಮತ್ತು 7 ರವರ ಸಮಕೆಮ ಜಪ್ತಿ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾಃ1 ಮತ್ತು12 ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯನ್ನು ವಿಚಾರಣೆಗೊಳಪಡಿಸಿ ಆರೋಪಿಯ ಸ್ವಋಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿತನ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ದಿಃ 09-04-2020 ರಂದು ಅದೇ ದಿನ ಅಪಘಾತಪಡಿಸಿದ ಟ್ರಾಕ್ಟರನ್ನು ಇಂಡಮ್ನಿಟಿ ಬಾಂಡ್ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ.

**ದಿಃ 21-04-2020 ರಂದು** ವಾಹನ ಪರೀವೀಕ್ಷಣಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ನಂತರ ದಾಖಲಾತಿಗಳನ್ನು ಪರಿಶೀಲಿಸಿ ತನಿಖೆ ಪೂರೈಸಿ ಮೇಲ್ನೋಟಕ್ಕೆ ಆರೋಪ ಸಾಭೀತಾದ ಹಿನ್ನೆಲೆಯಲ್ಲಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಿಪಿ-5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5 (ಎ) ಎಂದು, ನಿಪಿ-6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-6 (ಸಿ) ಎಂದು, ನಿಪಿ-8 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 (ಎ) ಎಂದು, ನಿಪಿ-13 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-13(ಎ)ಎಂದು, ನಿಪಿ-14 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-14 (ಎ) ಎಂದು, ಸ್ಕೆಚನ್ನು ನಿಪಿ-15 ಎಂದು, ಆರೋಪಿಯ ಸ್ವಋಷಿ ಹೇಳಿಕೆಯನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು, ಎರಡು ಐ ಎಂ ವಿ ನೋಟಿಸಗಳನ್ನು ನಿಪಿ-17 ಮತ್ತು 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-17(ಎ) ಮತ್ತು 18 (ಎ) ಎಂದು, ಇಂಡಮ್ನಿಟಿ ಬಾಂಡನ್ನು ನಿಪಿ-19 ಎಂದು, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ  ಎಸ್ ಬಿ  ವಕೀಲರಿಂದ</u>

ದಿಃ 27-02-2020 ರಂದು ಚಾಸಾಃ18 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು, ಅದೇ ದಿನ ಗುನ್ನೆ ಸ್ಥಳಕ್ಕೆ ಹೋಗಿ  ಬೆ 9-00 ರಿಂದ 10-00 ಗಂಟೆಗೆ ಗುನ್ನೆ ಸ್ಥಳದ ಪಂಚನಾಮೆಯನ್ನು ಚಾಸಾಃ 4 ಮತ್ತು 5 ರವರ ಸಮಕ್ಷಮ ಮಾಡಿ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ,  ಅಪಘಾತಪಡಿಸಿದ ವಾಹನವನ್ನು  ಜಪ್ತಿಪಡಿಸಿಕೊಂಡು ಐ ಎಂ ವಿ ವರದಿಗಾಗಿ ಆರ್ ಟಿ ಓ ಯಾದಗಿರಿಗೆ ಕಳುಹಿಸಿರುತ್ತೇನೆ,  ಅದೇ ದಿನ ಚಾಸಾಃ 9 ರಿಂದ 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ  ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ10-03-2020 ರಂದು ಚಾಸಾಃ 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ಅದೇ ದಿನ ಮೃತರ ಪಿ ಎಂ ಈ ವರದಿ ಹಾಗೂ ಗಾಯಾಳುಗಳ ಗಾಯದ ಪ್ರಮಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೂಂಡಿರುತ್ತೇನೆ  ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ01-04-2020 ರಂದು ಅಪಘಾತ ಪಡಿಸಿದ ಟ್ರಾಕ್ಟರನ  ಮಾಲೀಕನಿಗೆ ಐ ಎಂ ವಿ ನೋಟಿಸನ್ನು ನೀಡಿ ಅವರಿಂದ ಉತ್ತರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ, ಅದೇ ದಿನ ಮೆಸ್ಸಿ ಕಂಪನಿಯ ಟ್ರಾಕ್ಟರ ನಂ. ಕೆಎ-33-ಟಿಎ-0022 ನ್ನು ಚಾಸಾಃ6 ಮತ್ತು 7 ರವರ ಸಮಕೆಮ ಜಪ್ತಿ ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡಿರುತ್ತೇನೆ, ಚಾಸಾಃ1 ಮತ್ತು12 ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ,  ಆರೋಪಿಯನ್ನು ವಿಚಾರಣೆಗೊಳಪಡಿಸಿ ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಂತರ ಆರೋಪಿತನ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ  ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 09-04-2020 ರಂದು ಅದೇ ದಿನ ಅಪಘಾತಪಡಿಸಿದ ಟ್ರಾಕ್ಟರನ್ನು ಇಂಡಮ್ನಿಟಿ ಬಾಂಡ್ ಮೇಲೆ ಬಿಡುಗಡೆ ಗೊಳಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ **21-04-2020 ರಂದು** ವಾಹನ ಪರೀವೀಕ್ಷಣಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ದಾಖಲಾತಿಗಳನ್ನು ಪರಿಶೀಲಿಸಿ ತನಿಖೆ ಪೂರೈಸಿ ಮೇಲ್ನೋಟಕ್ಕೆ ಆರೋಪ ಸಾಭೀತಾದ ಹಿನ್ನೆಲೆಯಲ್ಲಿ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ